ಮೂಲ ದಾವೆ ನಂ. 117/2019

ಪಿ.ಡಬ್ಲ್ಯೂ.1

ದಿನಾಂಕಃ 03.12.2022
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಪಾಟೀ ಸವಾಲು ಪ್ರತಿವಾದಿಯರ ಪರವಾಗಿ ಶ್ರೀ ಬಿ.ಆರ್ ವಕೀಲರಿಂದ ಃ

7. ನನ್ನ ತಂದೆಯ ಮರಣ ಪ್ರಮಾಣ ಪತ್ರ ಈ ದಾವೆಯಲ್ಲಿ ಹಾಜರಪಡಿಸಿರುತ್ತೇನೆ. ನನ್ನ ತಂದೆಯ ಮರಣ ಪ್ರಮಾಣ ಪತ್ರ ಹಾಕದೇ ಇದ್ದರೂ ಸಹ ಅದನ್ನು ಈ ದಾವೆಯಲ್ಲಿ ಸಲ್ಲಿಸಿರುತ್ತೇನೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿಯ ತಂದೆ ಹಣಮಂತ ಇವರು ಈಗ 5 ವರ್ಷಗಳ ಹಿಂದೆ ಮರಣಹೊಂದಿರುತ್ತಾರೆ. 1 ನೇ ವಾದಿಯ ತಂದೆ ಹಣಮಂತ ಇವರು ಮರಣಹೊಂದಿದ ನಂತರ ನನ್ನ ತಂದೆ ನಿಂಗಪ್ಪ ಇವರು ಮರಣಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಇರುವ ಕಾಲಕ್ಕೆ ಪ್ರತಿವಾದಿಯರ ವಿರುದ್ದ ಪ್ರತಿವಾದಿಯರು ಮೋಸದಿಂದ ದಾವಾ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದು ಹೇಳಿ ತಕರಾರು ಮಾಡಿರುವುದಿಲ್ಲ. 1 ನೇ ವಾದಿಯ ತಂದೆ ಹಣಮಂತಪ್ಪ ಸಹ ತಮ್ಮ ಜೀವಿತ ಕಾಲಕ್ಕೆ ಅಂದರೆ ದಿಃ 28.09.2017 ಕ್ಕಿಂತ ಮುಂಚೆ ಪ್ರತಿವಾದಿಯರು ಮೋಸದಿಂದ ದಾವಾ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದು ಹೇಳಿ ಪ್ರತಿವಾದಿಯರ ವಿರುದ್ದ ತಕರಾರು ಮಾಡಿರುವುದಿಲ್ಲ. ಹಣಮಂತ ಮತ್ತು ನಿಂಗಪ್ಪ ಇವರುಗಳು ಪ್ರತಿವಾದಿಯರ ವಿರುದ್ದ ತಕರಾರು ಮಾಡದೇ ಇರುವದಕ್ಕೆ ಕಾರಣ ಅವರು ಸ್ವತಃ ಆಸ್ತಿಗಳನ್ನು ಪ್ರತಿವಾದಿಯರಿಗೆ ಮಾರಾಟ ಮಾಡಿರುವುದರಿಂದ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ.

8. ಒಬ್ಬ ಮರಲಿಂಗಪ್ಪ ಎನ್ನುವವರು ನನ್ನ ಸ್ವಂತ ಮಗನಾಗಿರುತ್ತಾನೆ. ನನ್ನ ಮಗ ಸದರಿ ದಾವಾ ಆಸ್ತಿಗಳನ್ನು ನಮ್ಮ ಹೆಸರಿಗೆ ಮಾಡುವಂತೆ ಕೋರಿ ತಹಶೀಲ್ದಾರ ವಡಗೇರಾ ಇವರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯಲ್ಲಿ ಸರ್ವೆ ನಂ.167/2 ರಲ್ಲಿ 9 ಎಕರೆ ಜಮೀನು ಹಾಗೂ ಸರ್ವೆ ನಂ. 168 ರಲ್ಲಿ 3 ಎಕರೆ ಜಮೀನು, ಮಾರಾಟ ಮಾಡಿದ ಬಗ್ಗೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನು ಖರಿದಿದಾರರ ಹೆಸರಿಗೆ ಪಹಣಿ ಪತ್ರಿಕೆಯಲ್ಲಿ ತಮ್ಮ ಹೆಸರು ನಮೂದಿಸಿಕೊಳ್ಳಲು ನಾನು ಮತ್ತು ಕುಟುಂಬದವರು ಒಪ್ಪಿಕೊಂಡಿರುತ್ತೇವೆ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗ ಮರಲಿಂಗಪ್ಪ ನನ್ನ ಜೊತೆಯಲ್ಲಿ ನಮ್ಮ ಊರಲ್ಲಿಯೇ ವಾಸವಾಗಿರುತ್ತಾನೆ. ನನ್ನ ಮಗನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ

ಸೇರಿಸಿರುವುದಿಲ್ಲ. ನನ್ನ ಮಗ ತಹಶೀಲ್ದಾರ ಕಛೇರಿಯಲ್ಲಿ ಒಂದು ವಂಶಾವಳಿ ಪತ್ರ ಸಲ್ಲಿಸಿದ್ದ ಅಂದರೆ ಸರಿ. ಆ ವಂಶಾವಳಿಯ ಪ್ರಕಾರ ಹಣಮಂತ ತಂದೆ ಹೈಯಾಳಪ್ಪ ಇವರಿಗೆ ಹೈಯಾಳಪ್ಪ ಒಬ್ಬನೇ ಮಗ ಎನ್ನುವ ಬಗ್ಗೆ ಬರೆದಿರುತ್ತಾರೆ ಎಂದರೆ ಸಾಕ್ಷಿಯು ಹಾಗೇ ಬರೆದಿರುವದು ನಿಜ ಇರುವುದಿಲ್ಲ ಎಂದು ಹೇಳುತ್ತಾರೆ. ನಾವು ತಹಶೀಲ್ದಾರರವರ ಮುಂದು ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಮಾಹಿತಿ ಒದಗಿಸಿದ್ದರಿಂದ ಅವರು ನಮ್ಮ ಅರ್ಜಿ ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ.

9. ಈ ದಾವಾ ದಾಖಲಸಿವ ಕಾಲಕ್ಕೆ ದಾವಾ ಆಸ್ತಿಗಳು ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ಹೆಸರಿನಲ್ಲಿ ಇದ್ದವು. ನನ್ನ ತಂದೆ ಮತ್ತು ಚಿಕ್ಕಪ್ಪ ಸೇರಿ ದಿಃ 06.02.1991 ರಂದು ಸರ್ವೆ ನಂ. 168 ರಲ್ಲಿ 8 ಎಕರೆ 23 ಗುಂಟೆಯ ಪೈಕಿ ಉತ್ತರ ಭಾಗದ 4 ಎಕರೆ 12 ಗುಂಟೆ ಜಮೀನು ಹಾಗೂ ಸರ್ವೆ ನಂ. 167 ರಲ್ಲಿ 18 ಎಕರೆ 24 ಗುಂಟೆಯ ಪೈಕಿ ದಕ್ಷಿಣ ಭಾಗದ 9 ಎಕರೆ 12 ಗುಂಟೆ ಜಮೀನನ್ನು 2 ನೇ ಪ್ರತಿವಾದಿಗೆ 30,000/- ರೂಪಾಯಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಕ್ಕೆ ಸಾಕ್ಷಿದಾರರೆಂದು ಹೇಳಿ ಹಣಮಂತ್ರಾಯ ತಂದೆ ತಿಮ್ಮಯ್ಯ ಮತ್ತು ಭೀಮಣ್ಣ ತಂದೆ ಯಂಕಣ್ಣ ಇವರುಗಳು ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಕ್ರಯ ಪತ್ರದ ಆಧಾರದ ಮೇಲೆ 2 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಗೊಂಡು ಮುಟೇಶನ ಆಗಿ ಅಲ್ಲಿಂದ ಇಲ್ಲಿಯವರೆಗೆ 2 ನೇ ಪ್ರತಿವಾದಿ ಆ ಆಸ್ತಿಗಳ ಮಾಲೀಕ ಮತ್ತು ಕಬ್ಜಾದಾರ ಆಗಿರುತ್ತಾರೆ ಎಂದರೆ ಸರಿಯಲ್ಲ. ಮೇಲೆ ಉಳಿದ ಇನ್ನುಳಿದ ಅರ್ಧ ಭಾಗ ಅದೇ ದಿನ 1 ನೇ ಪ್ರತಿವಾದಿಗೆ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಸೇರಿ 30,000/- ರೂಪಾಯಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ತಾವು ಖರೀದಿಸಿದ ಜಮೀನುಗಳ ಮಾಲೀಕರು ಮತ್ತು ಕಬ್ಜಾದಾರರು ಇರುತ್ತಾರೆ ಎಂದರೆ ಸರಿಯಲ್ಲ.

10. 1 ನೇ ಪ್ರತಿವಾದಿ ಜಮೀನು ಖರೀದಿಸಿದ ನಂತರ 1997-98 ರಲ್ಲಿ ಆ ಜಮೀನನ್ನು ಕುಟುಂಬದ ಒಬ್ಬಂದಂತೆ ತನ್ನ ತಮ್ಮ ಹಾಗೂ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಾಗೇ ವಿಭಾಗ ಪತ್ರ ಮಾಡಿಕೊಟ್ಟ ದಿನದಿಂದ ಇಲ್ಲಿಯವರೆಗೆ 1 ನೇ ಪ್ರತಿವಾದಿಯ ತಮ್ಮ ಮತ್ತು ಮಕ್ಕಳು ಮಾಲೀಕರು ಮತ್ತು ಕಬ್ಜಾದಾರರು ಆಗಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಮೋಸದಿಂದ ಜಮೀನು ಖರೀದಿಸಿದ ಬಗ್ಗೆ ನನಗೆ 3 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ನಮಗೆ ಹಾಗೆ ಗೊತ್ತಾದ ನಂತರ ನಾನು ಪ್ರತಿವಾದಿಯರ ವಿರುದ್ದ ಪೊಲೀಸರಿಗೆ ಯಾವುದೇ ದೂರು ನೀಡಿರುವುದಿಲ್ಲ. ದಾವಾ

ಆಸ್ತಿಗಳ ಮೇಲೆ ಪ್ರತಿವಾದಿಯರು ವಿ.ಎಸ್.ಎಸ್.ಎನ್ ಸೊಸೈಟಿ ವಡಗೇರಾದಲ್ಲಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. 2 ನೇ ಪ್ರತಿವಾದಿಯ ಸಹೋದರ ಲಿಂಬಾ ನಾಯಕ ಇವರು ಕೆ.ಎಸ್.ಎಫ್.ಸಿ. ಇಂದ ದಾವಾ ಆಸ್ತಿಗಳ ಮೇಲೆ 2013-14 ರಲ್ಲಿ 1,60,000/- ರೂಪಾಯಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಲಿಂಬಾ ನಾಯಕ ಇವರು ಸಾಲ ಮರುಪಾವತಿಸದ ಕಾರಣ ಕೆ.ಎಸ್.ಎಫ್.ಸಿ. ರವರು ಜಮೀನು ಸರ್ವೆ ನಂ. 167/2 ರಲ್ಲಿನ 4 ಎಕರೆ 26 ಗುಂಟೆ ಜಮೀನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ಜಮೀನಿನ ಪಹಣಿ ಪತ್ರಿಕೆಯಲ್ಲಿ ಕರ್ನಾಟಕ ಸರಕಾರದ ಹೆಸರು ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿಯೂ ಸಹ ಕೆ.ಎಸ್.ಎಫ್.ಸಿ. ರವರು ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ. ಪಹಣಿ ಯಲ್ಲಿ ನಮೂದಾಗಿರುವ ಕರ್ನಾಟಕ ಸರಕಾರದ ಹೆಸರನ್ನು ತೆಗೆಯಲು ಏನಾದರೂ ಕ್ರಮ ತೆಗೆದುಕೊಂಡಿದ್ದಿರಾ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ನಾನು ಆ ಬಗ್ಗೆ ಕ್ರಮ ಕೈಗೊಂಡಿರುವುದಿಲ್ಲ ಎಂದು ಹೇಳುತ್ತಾರೆ. ನಾನು ದಾವೆ ದಾಖಲಿಸುವ ಕಾಲಕ್ಕೆ ಪಹಣಿ ಪತ್ರಿಕೆ ನೋಡಿರುತ್ತೇನೆ ಅದರಲ್ಲಿ ಕರ್ನಾಟಕ ಸರಕಾರ ಎಂದು ನಮೂದಾಗಿರುವುದಿಲ್ಲ. ಪಹಣಿ ಪತ್ರಿಕೆಯಲ್ಲಿ ಕರ್ನಾಟಕ ಸರಕಾರ ಎಂದು ನಮೂದಾಗಿದ್ದರೂ ಸಹ ಆ ರೀತಿ ನಮೂದಾಗಿರುವುದಿಲ್ಲ ಎಂದು ಹೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನನ್ನ ತಂಗಿ ದೇವಮ್ಮ, ನನ್ನ ಮಗ ಮರಲಿಂಗ ಮತ್ತು ಕರ್ನಾಟ ಸರಕಾರವನ್ನು ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಮತ್ತು ನಮ್ಮ ಕುಟುಂಬದವರೆಲ್ಲರೂ ಸೇರಿ ದಾವೆ ದಾಖಲಿಸಿರುತ್ತೇವೆ ಎಂದು ಹೇಳುತ್ತಾರೆ. ನಾನು ಪಹಣಿ ಪತ್ರಿಕೆಗಳನ್ನು ಸುಳ್ಳು ಸೃಷ್ಟಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.